159266

(80)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ವಿವೇಕಾನಂದ ಇವರು ನಿಯಮ 72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ**

**ವಿಷಯ**

ಕೈಗಾರಿಕೆ ತರಬೇತಿ ಮತ್ತು ಉದ್ಯೋಗ ಇಲಾಖೆಯಲ್ಲಿ ತರಬೇತಿ ವಿಭಾಗದ ಪ್ರಾಚಾರ್ಯರು ದರ್ಜೆ-2 / ಸಮಾನಾಂತರ ಹುದ್ದೆಗಳಿಗೆ ಬಿ ಇ ಪದವಿ ಆಧಾರದ ಮೇಲೆ ಕಿರಿಯ ತರಬೇತಿ ಅಧಿಕಾರಿ/ತರಬೇತಿ ಅಧಿಕಾರಿಗಳಿಗೆ ನೀಡಲಾದ ಮುಂಬಡ್ತಿಗಳನ್ನು ಹಿಂಪಡೆಯುವ ಸಂಬಂಧ ದಿ:28-11-2024 ರಂದು ಸರ್ಕಾರವು ಆದೇಶವನ್ನು ಜಾರಿ ಮಾಡಿ ಈಗಾಗಲೇ 1.5 ವರ್ಷಗಳು ಕಳೆದಿವೆ. ಅವರಲ್ಲಿ ಕೆಲವರು ನಿವೃತ್ತರಾಗಿದ್ದಾರೆ & ಸುಮಾರು 30 ಮಂದಿ ಇನ್ನೂ ಪ್ರಾಚಾರ್ಯರು ದರ್ಜೆ-1 ದರ್ಜೆ 2 ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯದಲ್ಲಿ ಸುಮಾರು 50 ರಿಂದ 60 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರಾಚಾರ್ಯರ ಹುದ್ದೆಗಳು ಖಾಲಿ ಇವೆ ಹಾಗೂ ಈ ಸಂಸ್ಥೆಗಳಲ್ಲಿ ಖಾಯಂ ಪ್ರಾಚಾರ್ಯರಿಲ್ಲದ ಕಾರ್ಯ ನಿರ್ವಹಿಸಲಾಗುತ್ತಿದೆ. ಪ್ರಸ್ತುತ ಲಭ್ಯವಿರುವ ಪ್ರಾಚಾರ್ಯರುಗಳಿಗೆ 2 ಅಥವಾ 3 ಸಂಸ್ಥೆಗಳ ಹೆಚ್ಚುವರಿ ಪ್ರಭಾರೆಯನ್ನು ವಹಿಸಲಾಗಿದ್ದು ಇದರಿಂದಾಗಿ ಆಡಳಿತ ನಿರ್ವಹಣೆ & ಕಾರ್ಯದ ಮೇಲಿನ ಏಕಾಗ್ರತೆಯ ಕೊರತೆ ಉಂಟಾಗುತ್ತಿದೆ. ಆದ್ದರಿಂದ ತರಬೇತಿದಾರರು ಅರ್ಧದಲ್ಲೆ ಬಿಡುವ ಸಮಸ್ಯೆ ಕಂಡುಬರುತ್ತದೆ. ಇದರ ಬಗ್ಗೆ ಇಲಾಖೆಯು ದಿ: 16/07/2026 ರಂದು 50% ಕ್ಕಿಂತಲೂ ಹೆಚ್ಚು ಡ್ರಾಪ್ ಔಟ್ ಹಾಗೂ 30% ಕ್ಕಿಂತಲೂ ಕಡಿಮೆ ಪ್ರವೇಶಾತಿ ಅಗಿರುವ ಸಂಸ್ಥೆಗಳ ಪ್ರಾಚಾರ್ಯರಿಗೆ ಎಚ್ಚರಿಕೆ ಪತ್ರ ನೀಡಿರುತ್ತಾರೆ. ಬಿ ಇ ಪದವಿ ಆದಾರದ ಮೇಲೆ ಕಿರಿಯ ತರಬೇತಿ ಅಧಿಕಾರಿ/ತರಬೇತಿ ಅಧಿಕಾರಿಗಳಿಗೆ ನೀಡಲಾದ ಮುಂಬಡ್ತಿಗಳ ಪ್ರಕರಣ/ಮೇಲ್ಮನವಿಗಳನ್ನು ಈಗಾಗಲೇ ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯ ವಜಾಗೊಳಿಸಿ 2.5 ವರ್ಷಕ್ಕೂ ಹೆಚ್ಚು ಸಮಯ ಕಳೆದಿದೆ. ನ್ಯಾಯಾಲಯಗಳು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸಲು ಹಾಗೂ ಸರ್ಕಾರದ ಆದೇಶವನ್ನು ಪಾಲಿಸಲು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ನಿರ್ದೇಶಕರು ತಮ್ಮ ಇ-ಆಫೀಸ್ ಲಾಗಿನ್ ನಲ್ಲಿ ಬಾಕಿ ಇರಿಸಿಕೊಂಡು ಆಯುಕ್ತರು ಅನುಮೋದನೆಗಾಗಿ ಕಡತವನ್ನು ಕಳುಹಿಸುತ್ತಿಲ್ಲ ಇದರಿಂದ ಪ್ರಮುಖ ವ್ಯಕ್ತಿಗಳನ್ನು ರಕ್ಷಿಸಲಾಗುತ್ತಿದೆ & ಕಾಲಹರಣ ಮಾಡುವ ಉದ್ದೇಶದಿಂದ ಪ್ರಕ್ರಿಯೆಯನ್ನು ವಿಳಂಬಗೊಳಿಸಿ ಸಂಬಂಧಪಟ್ಟ ಪ್ರಾಚಾರ್ಯರುಗಳಿಗೆ ಪದೇ ಪದೇ ನ್ಯಾಯಾಲಯ ಮೊರೆ ಹೋಗುವಂತೆ ನಿರ್ದೇಶಕರು ಅವರನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂದು ತಿಳಿದುಬಂದಿದೆ. ಈ ನಡವಳಿಕೆಯು ಅತ್ಯಂತ ದೊಡ್ಡ ಮೊತ್ತದ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತಿದೆ ಎಂಬುದರ ಕುರಿತು ಮಾನ್ಯ ಸಚಿವರ ಗಮನಕ್ಕೆ ಸೆಳೆಯುತ್ತಾ ಇಲಾಖೆ ವಿರುದ್ಧ ಹಾಗೂ ಕಾಲಹರಣ ಮಾಡುವ ಉದ್ದೇಶದಿಂದ ಮಾನ್ಯ ಸರ್ವೋಚ್ಚನ್ಯಾಯಾಲಯ ತೀರ್ಪನ್ನು ಪುನರಾವರ್ತಿತ ಪ್ರಶ್ನಿಸಿ ಮತ್ತೊಮ್ಮೆ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಾಮಂಡಳಿ ಮೊರೆ ಹೋದ ಪ್ರಾಚಾರ್ಯರುಗಳನ್ನು ಹೊರತುಪಡಿಸಿ ಉಳಿದ ಪ್ರಾಚಾರ್ಯರುಗಳ ಮುಂಬಡ್ತಿಯನ್ನು ಸರ್ಕಾರದ ಆದೇಶದಂತೆ ಕೊಡಲೇ ಪುನರಾವಲೋಕಿಸುವುದು & ಸಾಮಾನ್ಯ ಜೇಷ್ಠತೆ ಆಧಾರದ ಮೇಲಿನ ಸುಗಮ ಪ್ರಕ್ರಿಯೆಯ ಮೂಲಕ ಅರ್ಹ ತರಬೇತಿ ಅಧಿಕಾರಿಗಳನ್ನು ಪ್ರಾಚಾರ್ಯರನ್ನಾಗಿ ಬಡ್ತಿ ನೀಡಿ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಗಳ ಆಡಳಿತವನ್ನು ಬಲಪಡಿಸಬೇಕೆಂದು ಹಾಗೂ ಇಲಾಖೆಯ ಈ ಪ್ರಕ್ರಿಯೆಯನ್ನು ವಿಳಂಬಗೊಳಿಸಲು ಕಾರಣವೇನೆಂದು ಸಂಪೂರ್ಣ ಮಾಹಿತಿ ನೀಡುವಂತೆ ಮಾನ್ಯ ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

**ಹೇಳಿಕೆ**

1. **ಕೈಗಾರಿಕೆ ತರಬೇತಿ ಮತ್ತು ಉದ್ಯೋಗ ಇಲಾಖೆಯಲ್ಲಿ ತರಬೇತಿ ವಿಭಾಗದ ಪ್ರಾಚಾರ್ಯರು ದರ್ಜೆ 2/ ಸಮಾನಾಂತರ ಹುದ್ದೆಗಳಿಗೆ ಬಿ ಇ ಪದವಿ ಆಧಾರದ ಮೇಲೆ ಕಿರಿಯ ತರಬೇತಿ ಅಧಿಕಾರಿ/ತರಬೇತಿ ಅಧಿಕಾರಿಗಳಿಗೆ ನೀಡಲಾದ ಮುಂಬಡ್ತಿಗಳನ್ನು ಹಿಂಪಡೆಯುವ ಸಂಬಂಧ ಕೈಗೊಂಡ ಕ್ರಮಗಳ ವಿವರ:-**
    1. ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 116 ಕೈತಸೇ 2024 (ಭಾಗ-2) ದಿನಾಂಕ: 28.11.2024 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪು ದಿನಾಂಕ:11-01-2024ನ್ನು ಅನುಷ್ಠಾನಗೊಳಿಸುವ ಸಂಬಂಧ ಅಧಿಕಾರಿಗಳಿಗೆ ಆಯುಕ್ತರು ಸ್ಥಳ ನಿಯುಕ್ತಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಗಿರುತ್ತದೆ.

--2

2. ಸರ್ಕಾರದ ಆದೇಶ ದಿನಾಂಕ: 28.11.2024 ರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠ ಇಲ್ಲಿ ದಾಖಲಾಗಿರುವ WP No: 34232 of 2024 (S-KSAT) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ:17-12-2024ರಲ್ಲಿ ತಡೆಯಾಜ್ಞೆ ನೀಡಿರುತ್ತದೆ.

3. ಮಾನ್ಯ ಕೆ.ಎಸ್.ಎ.ಟಿ., ಬೆಂಗಳೂರು ಇಲ್ಲಿ ಸಲ್ಲಿಸಿರುವ ಅರ್ಜಿ ಸಂ: 5516-5524/2024 C/W 6127-6137/2024 ಶ್ರೀ. ಏಕನಾಥ್ ಮತ್ತಿತರರು ವಿರುದ್ಧ- ರಾಜ್ಯ ಸರ್ಕಾರ ಪ್ರಕರಣವನ್ನು ಮಾನ್ಯ ನ್ಯಾಯಾಲಯವು ದಿನಾಂಕ: 21-04-2025ರ ಆದೇಶದನ್ವಯ ವಿಲೇವಾರಿಗೊಳಿಸಿರುತ್ತದೆ.

4. ಆಯುಕ್ತಾಲಯದ ಆದೇಶ ಸಂಖ್ಯೆ: ಕೈತಉ/ತರಬೇತಿ/ಆಡಳಿತ-6/ವಿವ-18/12-13 ಸಂಪುಟ-2 ದಿನಾಂಕ: 09/05/2025ರ ಆದೇಶದಲ್ಲಿ ವರ್ಗಾವಣೆ ಮುಂಬಡ್ತಿಯನ್ನು ಪುನರಾವಲೋಕಿಸಲಾದ ಅಧಿಕಾರಿಗಳಲ್ಲಿ ಸೇವೆಯಲ್ಲಿರುವ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸಿ ಚಲನಾದೇಶವನ್ನು ಹೊರಡಿಸಲಾಗಿದೆ.

5. ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂ: 14704/2025 ಶ್ರೀ. ಏಕನಾಥ್ ಮತ್ತಿತರರು ವಿರುದ್ಧ- ರಾಜ್ಯ ಸರ್ಕಾರದಲ್ಲಿ ನೀಡಿರುವ ಆದೇಶ ದಿನಾಂಕ:22-05-2025 ರಲ್ಲಿ ಅರ್ಜಿ ಸಂ: 5516-5524/2024 C/W 6127-6137/2024 ಪ್ರಕರಣವನ್ನು ಮಾನ್ಯ ಕೆ.ಎಸ್.ಎ.ಟಿ. ಯು ದಿನಾಂಕ: 21-04-2025 ರ ಆದೇಶದನ್ವಯ ವಿಲೇವಾರಿಗೊಳಿಸಿದೆ.

6. ಮೇಲಿನ ತಡೆಯಾಜ್ಞೆಯಂತೆ ಆಯುಕ್ತಾಲಯದ ಆದೇಶ ಸಂಖ್ಯೆ: ಕೈತಉ/ತರಬೇತಿ/ಆಡಳಿತ-6/ವಿವ-18/12-13 ಸಂಪುಟ-2 ದಿನಾಂಕ: 26/05/2025 ರಲ್ಲಿ ದಿನಾಂಕ:09-05-2025 ರ ಆದೇಶದ ಪೂರ್ವದಲ್ಲಿದ್ದಂತೆ, ಮಾನ್ಯ ನ್ಯಾಯಾಲಯದ ಪ್ರಕರಣದ ತೀರ್ಮಾನದ ಷರತ್ತಿಗೆ ಒಳಪಟ್ಟು ಅಥವಾ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ಆದೇಶಿಸಲಾಗಿತ್ತು.

7. ಮಾನ್ಯ ಕೆ.ಎಸ್.ಎ.ಟಿ ಬೆಂಗಳೂರು ಪೀಠ, ಇಲ್ಲಿ ದಾಖಲಾಗಿರುವ ಅರ್ಜಿ ಸಂಖ್ಯೆ: 5516-5524 /2024 ಶ್ರೀ.ಏಕನಾಥ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ (Connected with App no: 6127-6137 and App no 2190-2200/2025) ರಲ್ಲಿ ನೀಡಿರುವ ಆದೇಶ ದಿನಾಂಕ:12-06-2026ರ ತೀರ್ಪಿನ ಅನ್ವಯ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

8. ಮಾನ್ಯ ಕೆ.ಎಸ್.ಎ.ಟಿ ಬೆಂಗಳೂರು ಪೀಠದ ದಿನಾಂಕ:12-06-2026ರ ಆದೇಶದ ವಿರುದ್ಧ, ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ, ಇಲ್ಲಿ ದಾಖಲಾಗಿರುವ ಅರ್ಜಿ ಸಂಖ್ಯೆ: 105239/2026 ಶ್ರೀ ಏಕನಾಥ ಎನ್ ಮತ್ತು ಇತರರು – ವಿರುದ್ಧ- ರಾಜ್ಯ ಸರ್ಕಾರ ಪ್ರಕರಣವು ದಿ: 06-07-2026 ರಂದು status-quo insofar as position of the petitioners ಎಂದು ತೀರ್ಪು ನೀಡಿರುತ್ತದೆ. (ಪ್ರಕರಣದಲ್ಲಿ 07 ಅಧಿಕಾರಿಗಳು Petitioners ಆಗಿರುತ್ತಾರೆ.)

ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ದಾಖಲಾಗಿದ್ದ ಅರ್ಜಿ ಸಂಖ್ಯೆ: 105239/2026, ಶ್ರೀ. ಏಕನಾಥ ಎನ್ ವಿರುದ್ಧ - ರಾಜ್ಯ ಸರ್ಕಾರ, ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠವು ದಿನಾಂಕ: 22-07-2026 ರ ತೀರ್ಪಿನ ಅನ್ವಯ ವಿಲೇಗೊಳಿಸಿದೆ.

--3

9. ಮಾನ್ಯ ಕೆ.ಎಸ್.ಎ.ಟಿ ಬೆಳಗಾವಿ ಪೀಠ, ಇಲ್ಲಿ ಶ್ರೀ.ರಾಜಶೇಖರ ಎಸ್ ಚಿಕ್ಕಮಠ ಮತ್ತು ಶ್ರೀ.ಎಸ್.ಎಸ್ ಖಿಲಾರೆ ಪ್ರಾಚಾರ್ಯರು ದರ್ಜೆ-1 ರವರುಗಳು ದಾಖಲಾಗಿರುವ ಅರ್ಜಿ ಸಂಖ್ಯೆ: 11042-11043 /2026 ರಲ್ಲಿ ನೀಡಿರುವ ಮಧ್ಯಂತರ ಆದೇಶ ದಿನಾಂಕ:29-07-2026ರಲ್ಲಿ ಈ ಕೆಳಕಂಡಂತೆ ಆದೇಶಿಸಿದೆ. ಪ್ರಕರಣದಲ್ಲಿ 02 ಅಧಿಕಾರಿಗಳು Applicants ಆಗಿರುತ್ತಾರೆ. in so far as the applicants are concerned are hereby stayed till the next date of hearing.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ, ದಿನಾಂಕ:12-06-2026 ನ್ಯಾಯಾಲಯದ ತೀರ್ಪು ಮತ್ತು ದಿನಾಂಕ: ದಿ: 06-07-2026, 22-07-2026 ಮತ್ತು 29-07-2026 ನ್ಯಾಯಾಲಯದ ಮಧ್ಯಂತರ ಆದೇಶವಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 116 ಕೈತಸೇ 2024 (ಭಾಗ-2) ದಿನಾಂಕ: 28.11.2024 ರಂತೆ, ವರ್ಗಾವಣೆ ಮುಂಬಡ್ತಿಯನ್ನು ಪುನರಾವಲೋಕಿಸಲಾದ ಅಧಿಕಾರಿಗಳಲ್ಲಿ ಸೇವೆಯಲ್ಲಿರುವ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸಿ ದಿನಾಂಕ:11-08-2026ರಲ್ಲಿ ಚಲನಾದೇಶವನ್ನು ಹೊರಡಿಸಲಾಗಿದೆ.

i. ವರ್ಗಾವಣೆ ಮುಂಬಡ್ತಿ ಹೊಂದಿದ್ದ 62 ಅಧಿಕಾರಿಗಳಲ್ಲಿ 33 ಅಧಿಕಾರಿಗಳು ಸರ್ಕಾರಿ ಸೇವೆಯಿಂದ ವಯೋನಿವೃತ್ತರಾಗಿದ್ದು, ಪ್ರಸ್ತುತ 29 ಅಧಿಕಾರಿಗಳು ಸೇವೆಯಲ್ಲಿದ್ದು, ಸದರಿ ಅಧಿಕಾರಿಗಳ ಪೈಕಿ 09 ಅಧಿಕಾರಿಗಳಿಗೆ ಪುನರಾವಲೋಕನಗೊಳಿಸಲು ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ.
ii. 02 ಅಧಿಕಾರಿಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಕೌಉಜೀಇ 44 ಕೈತಸೇ 2025 (ಭಾಗ-1) ದಿನಾಂಕ:20-05-2026 ರಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದದ ಉಪ ನಿರ್ದೇಶಕರು (ತ)/ಪ್ರಾಚಾರ್ಯರು ದರ್ಜೆ-1 ಹುದ್ದೆಗಳನ್ನು ಅರ್ಹ ಉಳಿಕೆ ಮೂಲ ವೃಂದದ ಪ್ರಾಚಾರ್ಯರು ದರ್ಜೆ-2 ಹಾಗೂ ಸಮಾನಾಂತರ ಹುದ್ದೆಗಳ ಅಧಿಕಾರಿಗಳಿಗೆ ಮುಂಬಡ್ತಿ ನೀಡಿ ಆದೇಶಿಸಲಾಗಿರುತ್ತದೆ. ಅದರಂತೆ ಸದರಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿರುತ್ತಾರೆ.
iii. ಬಾಕಿ ಉಳಿದಿರುವ 18 ಅಧಿಕಾರಿಗಳು ಪುನರಾವಲೋಕನಗೊಳಿಸಿರುವ ಆದೇಶದಂತೆ ನಿಯೋಜಿಸಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ವರದಿಮಾಡಿಕೊಳ್ಳುವ ಪ್ರಕ್ರಿಯೆಗಳು ಚಾಲ್ತಿಯಲ್ಲಿದ್ದು, ಅಂತಿಮ ಹಂತದಲ್ಲಿರುತ್ತದೆ.

ಈ ಮೇಲಿನ ಎಲ್ಲಾ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 116 ಕೈತಸೇ 2024 (ಭಾಗ-2) ದಿನಾಂಕ: 28.11.2024 ರ ಮೇರೆಗೆ ಬಾದಿತ ಅಧಿಕಾರಿಗಳು ಮಾನ್ಯ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಿಸುತ್ತಿರುವುದರಿಂದ ಮಾನ್ಯ ನ್ಯಾಯಾಲಯದ ಆದೇಶದಂತೆ ಕಾಲ ಕಾಲಕ್ಕೆ ಆಯುಕ್ತರೊಂದಿಗೆ ಚರ್ಚಿಸಿ ನಿರ್ದೇಶಕರು ಕ್ರಮವಹಿಸಿರುತ್ತಾರೆ. ಇಲಾಖೆಯ ನಿರ್ದೇಶಕರು ಉದ್ದೇಶಪೂರ್ವಕವಾಗಿ ಕಡತವನ್ನು ಬಾಕಿ ಇರಿಸಿಕೊಂಡು ಯಾವುದೇ ವಿಳಂಬಕ್ಕೆ ಅವಕಾಶ ನೀಡಿರುವುದಿಲ್ಲ.

2. **<u>ತರಬೇತಿ ಅಧಿಕಾರಿ ಹುದ್ದೆಯಿಂದ ಪ್ರಾಚಾರ್ಯರು ದರ್ಜೆ-2/ ಸಹಾಯಕ ನಿರ್ದೇಶಕರು(ತ) ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ ಇಲಾಖೆಯಿಂದ ತೆಗೆದುಕೊಂಡಿರುವ ಕ್ರಮದ ವಿವರ:-</u>**

ಪ್ರಸ್ತುತ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರು (ತ)/ಪ್ರಾಚಾರ್ಯರು ದರ್ಜೆ-2 ಹುದ್ದೆಗಳಿಗೆ ತರಬೇತಿ ಅಧಿಕಾರಿಗಳಿಂದ ಮುಂಬಡ್ತಿ ನೀಡಲು ದಿನಾಂಕ: 27-10-2025 ರಂದು ಅರ್ಹ ನೌಕರರುಗಳ ಸೇವಾ ವಿವರಗಳನ್ನು ಹಾಗೂ ಸೇವಾ ಪುಸ್ತಕಗಳನ್ನು ಸಲ್ಲಿಸಲು ಸುತ್ತೋಲೆ ಹೊರಡಿಸಿ, ಸೇವಾ ಪುಸ್ತಕಗಳನ್ನು ಸ್ವೀಕರಿಸಲಾಗಿದೆ. ಅರ್ಹ ನೌಕರರುಗಳ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ (ಉನ್ನತ ಶಿಕ್ಷಣ ಇಲಾಖೆ) ಸಂಖ್ಯೆ: ಇಡಿ/108/ಟಿಪಿಇ 2022 ದಿನಾಂಕ: 06-03-2023 ಮತ್ತು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ರಾಜ್ಯ ಸರ್ಕಾರದ ಅಡಿಯಲ್ಲಿ ಬರುವ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳು ಡಿಪ್ಲೊಮೋ/ಇಂಜಿನಿಯರಿಂಗ್ ಪದವಿ ವಿದ್ಯಾರ್ಹತೆಯ ಮೇರೆಗೆ ವಿವಿಧ ವೃಂದಗಳಲ್ಲಿ ಹುದ್ದೆಗಳನ್ನು ನೇಮಕಾತಿ/ಮುಂಬಡ್ತಿಯಿಂದ ಭರ್ತಿ

--4

ಮಾಡುವ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸುವ ಡಿಪ್ಲೊಮೋ/ಇಂಜಿನಿಯರಿಂಗ್ ಪದವಿ ವಿದ್ಯಾರ್ಹತೆಯ ಮಾನ್ಯತೆ/ನೈಜತೆಯ ಬಗ್ಗೆ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಸ್ಪಷ್ಟೀಕರಣವನ್ನು ಪಡೆಯಲು ತಿಳಿಸಲಾಗಿರುತ್ತದೆ.

ಅದರಂತೆ, ಇಲಾಖೆಯಿಂದ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ: 28-01-2026 ಮತ್ತು ದಿನಾಂಕ: 18-07-2026 ರಂದು ಡಿಪ್ಲೊಮೋ ಅಂಕಪಟ್ಟಿಗಳ ನೈಜತೆ ಪರಿಶೀಲನೆಗಾಗಿ ಪತ್ರ ಬರೆಯಲಾಗಿದೆ, ಪ್ರಸ್ತುತ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಅಂಕಪಟ್ಟಿಗಳ ನೈಜತೆ ಪರಿಶೀಲನೆಯ ವರದಿ ಸ್ವೀಕೃತವಾಗಿದ್ದು, ಈ ಮಧ್ಯೆ ಇಲಾಖೆಯಲ್ಲಿ ಕಿರಿಯ ತರಬೇತಿ ಅಧಿಕಾರಿ/ ತರಬೇತಿ ಅಧಿಕಾರಿ ಹುದ್ದೆಯಿಂದ ಪ್ರಾಚಾರ್ಯರು ದರ್ಜೆ-2/ ಸಹಾಯಕ ನಿರ್ದೇಶಕರು(ತ) ಹುದ್ದೆಗೆ ವರ್ಗಾವಣೆ ಮುಂಬಡ್ತಿ (ಶೇಕಡ 33 1/3) ಹೊಂದಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ದಿನಾಂಕ:11-01-2024 ರನ್ವಯ ವರ್ಗಾವಣೆ ಮುಂಬಡ್ತಿ ಕೋಟಾವನ್ನು STRUCK DOWN ಮಾಡಿರುವುದರಿಂದ, ಸರ್ಕಾರದಿಂದ ಹೊರಡಿಸಲಾದ ದಿ:28-11-2024ರ ಪುನರಾವಲೋಕನ ಆದೇಶದ ಅನುಷ್ಠಾನಕ್ಕೆ ವಿವಿಧ ನ್ಯಾಯಾಲಯಗಳಲ್ಲಿ ಹೂಡಲಾಗಿದ್ದ ಪ್ರಕರಣಗಳು ಮಾನ್ಯ ಕೆ.ಎಸ್.ಎ.ಟಿ ಬೆಂಗಳೂರು ಪೀಠದ ಆದೇಶ ದಿನಾಂಕ: 12-06-2026ರಲ್ಲಿ ವಜಾಗೊಳಿಸಿ ಆದೇಶಿಸಿರುತ್ತದೆ.

ಅದರಂತೆ ಪ್ರಾಚಾರ್ಯರು ದರ್ಜೆ-2/ ಸಹಾಯಕ ನಿರ್ದೇಶಕರು(ತ) ಹುದ್ದೆಯ ನೇಮಕಾತಿ ವಿಧಾನದಲ್ಲಿ ವೃಂದ ಮತ್ತು ನೇಮಕಾತಿ ನಿಯಮ 1998 ರಲ್ಲಿದ್ದ ನಿಯಮಗಳನ್ನು ಸೇರಿದಂತೆ ಸಮಗ್ರವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಕ್ರಮವಹಿಸಲಾಗುತ್ತಿದೆ.

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ತರಬೇತಿ ಅಧಿಕಾರಿ ಹುದ್ದೆಯಲ್ಲಿ ಗರಿಷ್ಠ 03 ವರ್ಷಗಳ ಸೇವೆ ಸಲ್ಲಿಸಿರಬೇಕು. ಇಲಾಖೆಯಲ್ಲಿ ಪ್ರಸ್ತುತ ತರಬೇತಿ ಅಧಿಕಾರಿ ಹುದ್ದೆಯಲ್ಲಿ ಗರಿಷ್ಠ 03 ವರ್ಷಗಳ ಸೇವೆ ಪೂರೈಸಿರುವ ನೌಕರರನ್ನು ಪರಿಗಣಿಸಿ ಅರ್ಹ ತರಬೇತಿ ಅಧಿಕಾರಿಗಳಿಗೆ ಸಹಾಯಕ ನಿರ್ದೇಶಕರು(ತ)/ಪ್ರಾಚಾರ್ಯರು ದರ್ಜೆ-2 ಹುದ್ದೆಗೆ ಮುಂಬಡ್ತಿ ನೀಡಲು ತಾಂತ್ರಿಕ ಶಿಕ್ಷಣ ಇಲಾಖೆಯಿಂದ ವರದಿ ಸ್ವೀಕೃತವಾಗಿದ್ದು ಹಾಗೂ ಮಾನ್ಯ ನ್ಯಾಯಾಲಯದ ಆದೇಶದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಣೆ ನಂತರ ಮುಂಬಡ್ತಿಗೆ ಕ್ರಮವಹಿಸಲಾಗುವುದು.

**ಕೌಉಜೀಇ 66 ಕೈತಪ್ರ 2026**

(ಡಾ. ಶರಣಪ್ರಕಾಶ ಆರ್ ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.